**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‌ಃ399/2019**

ಸಿಡಬ್ಲ್ಯೂಃ1

ಪಿಡಬ್ಲ್ಯೂಃ1

| | | |
|---|---|---|
| ಸಾಕ್ಷಿಯ ಹೆಸರು | : | ಮಮತಾ ಎನ್ ಎ |
| ಗಂಡನ ಹೆಸರು | : | ಎಂ ಸಿ ಸಪ್ಪಾಳಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : | ಅಬಕಾರಿ ಉಪಾಯುಕ್ತ ಕಚೇರಿ ಚಿಕ್ಕಮಂಗಳೂರು |

ಇಂದು ದಿನಾಂಕ 29.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ನಾನು ದಿನಾಂಕ 09-09-2015 ರಿಂದ 28-07-2021 ರವರೆಗೆ ನಾನು ಅಬಕಾರಿ ನಿರೀಕ್ಷಕರಳಾಗಿ ಉಪ ಆಯುಕ್ತರ ಕಚೇರಿ ಹಾವೇರಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 21.06.2019 ರಂದು ರಾತ್ರಿ 8.45 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-4 ರವರು ಸರಕಾರಿ ವಾಹನದಲ್ಲಿ ಹಿರೇಕೆರೂರು ತಾಲೂಕಿನ ಹಂಸಬಾವಿ ಕ್ರಾಸ್ ನಿಂದ ತುಮರಿಕೊಪ್ಪ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ರಸ್ತೆ ಗಾವಲು ಮಾಡುತ್ತಿದ್ದಾಗ, ಅದೇ ತಾಲೂಕಿನ ಚೊಗಚಿಕೊಪ್ಪ ತಾಂಡದಲ್ಲಿ ಅಬಕಾರಿ ಅಕ್ರಮಗಳು ಜರುಗಬಹುದು ಎಂದು ಊಹಿಸಿ ದಾಳಿ ಮತ್ತು ಗಸ್ತು ಮಾಡುವ ಸಲುವಾಗಿ ವಿಷಯವನ್ನು ಸಿಬ್ಬಂದಿಗಳಿಗೆ ತಿಳಿಸಿ ಪಂಚರನ್ನು ಕರೆದುಕೊಂಡು ಬರಲು ಹೇಳಿದ್ದು, ಮುಂದುವರೆದು 9.00 ಗಂಟೆಗೆ ತುಮರಿಕೊಪ್ಪ ಗ್ರಾಮದ ಬಸ್ ನಿಲ್ದಾಣದಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ನಮ್ಮ ಸಿಬ್ಬಂದಿಯವರು ಸಂಪರ್ಕಿಸಿ ವಿಷಯವನ್ನು ತಿಳಿಸಿ ನನ್ನ ಬಳಿ ಕರೆದುಕೊಂಡು ಬಂದಿರುತ್ತಾರೆ. ಸದರಿ ವ್ಯಕ್ತಿಗಳನ್ನು ಪಂಚರಾಗಿ ಸಹಕರಿಸಲು ಕೋರಿದ್ದು, ಅವರು ಒಪ್ಪಿದ ಮೇರೆಗೆ ಅವರನ್ನು ಕರೆದುಕೊಂಡು ಚೊಗಚಿಕೊಪ್ಪ ತಾಂಡಕ್ಕೆ ಹೋಗಿರುತ್ತೇವೆ. ನಂತರ ಸದರಿ ಗ್ರಾಮದಲ್ಲಿ ಗಸ್ತು ಕರ್ತವ್ಯ ಮಾಡುತ್ತಿರುವಾಗ ಬೆಲ್ಲದ ಕೊಳೆ ವಾಸನೆ ಮೂಗಿಗೆ ಬಂದಿದ್ದು, ಅನುಮಾನದ ಮೇರೆಗೆ ಒಂದು ಹಿತ್ತಲಿನ ಬಳಿ ಹೋಗುತ್ತಿದ್ದಾಗ ಒಬ್ಬ ಹೆಣ್ಣು ಮಗಳು, ಏನೋ ವಸ್ತುಗಳನ್ನು ಹುಲ್ಲಿನ ಬಣಿವೆಯಲ್ಲಿ ಮುಚ್ಚಿಡುತ್ತಿರುವುದು ನಮಗೆ ಕಂಡು ಬಂದಿರುತ್ತದೆ. ನಂತರ

ನಾವು ಅಲ್ಲಿಗೆ ಹೋಗಿ ಆ ಬಗ್ಗೆ ಗಮನಿಸಿದಾಗ ಆಕೆ ತಡವರಿಸುತ್ತಿದ್ದು, ಆಗ ನಮಗೆ ಸಂಶಯ ಬಂದು ಅಲ್ಲಿ ತೆಗೆದುನೋಡಿದಾಗ 10 ಲೀ ಅಳತೆಯ 2 ಹಸಿರು ಬಣ್ಣದ, 10 ಲೀ ಅಳತೆಯ ನೀಲಿ ಬಣ್ಣದ, 10 ಲೀ ಅಳತೆಯ ಒಂದು ನೇರಳೆ ಬಣ್ಣದ ಒಟ್ಟು 5 ಕೊಡಗಳಲ್ಲಿ ಬೆಲ್ಲದ ಕೊಳೆ ಇರುವುದು ಕಂಡು ಬಂದಿರುತ್ತದೆ. ಅದರ ಅಂದಾಜು ಸುಮಾರು 50 ಲೀ ಟರ್ ನಷ್ಟು ಇತ್ತು. ನಂತರ ಮುಂದುವರೆದು ಹುಡುಕಾಡಿದಾಗ 2 ಪ್ಲಾಸ್ಟಿಕ್ ಬಾಟಲ್ ನಲ್ಲಿ ಒಟ್ಟು 4 ಲೀ ನಷ್ಟು ಕಳ್ಳ ಬಟ್ಟಿ ಸಾರಾಯಿ ಇರುತ್ತದೆ. ನಂತರ ಆ ಹೆಣ್ಣು ಮಗಳನ್ನು ವಿಚಾರಣೆ ಮಾಡಿ ದಸ್ತಗಿರಿಯನ್ನು ಮಾಡಿರುತ್ತೇನೆ. ನತಂರ ಆಕೆ ವಿಳಾಸ ಮತ್ತು ಹೆಸರನ್ನು ತಿಳಿದುಕೊಂಡಿರುತ್ತೇನೆ. ನಂತರ ಅಲ್ಲಿ ಸಿಕ್ಕಂತಹ ಮಾಲುಗಳನ್ನು ವಶಪಡಿಸಿಕೊಂಡು 5 ಕೊಡಗಳಲ್ಲಿ ಸ್ವಲ್ಪ ಸ್ವಲ್ಪ ದಂತೆ ಬೆಲ್ಲದ ಕೊಳೆಯನ್ನು ಒಟ್ಟು 750 ಮಿ ೀಲಿ ನಷ್ಟು ನಂತರ 2 ಬಾಟಲ್ ನಲ್ಲಿ ಪ್ರತಿ ಬಾಟಲನಲ್ಲಿ ತಲಾ 180 ಮಿಲಿ ನಷ್ಟು ರಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡು, ಅದಕ್ಕೆ ಚೀಟಿಯನ್ನು ಅಂಟಿಸಿ, ಅರಗಿನಿಂದ ಶೀಲ್ ಮಾಡಲಾಯಿತು. ನಂತರ ಪಂಚರ ಸಹಿಗಳನ್ನು ಪಡೆದು,ಪಂಚನಾಮೆಯನ್ನು ತಯಾರಿಸಿ ರಾತ್ರಿ 9.45 ರಿಂದ 11 ಗಂಟೆಯವರೆಗೆ ದೀಪದ ಬೆಳಕಿ ಸಹಾಯದಿಂದ ಪಂಚನಾಮೆಯನ್ನು ಮಾಡಿರುತ್ತೇವೆ. ಆರೋಪಿ ಮತ್ತು ಮಾಲಿನೊಂದಿಗೆ ಕಚೇರಿಗೆ ವಾಪಸಾಗಿ ಸ್ಥಳದಲ್ಲಿ ಆರೋಪಿಯ ವಿರುದ್ದ ದೂರನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇವೆ. ನಂತರ ಆರೋಪಿಯನ್ನು ಆ ದಾಖಲೆಗಳೊಂದಿಗೆ ನ್ಯಾಯಾಲಯದ ಮುಂದೆ ಹಾಜರಪಡಿಸಿರುತ್ತೇನೆ. ನಂತರ ಸಿಕ್ಕಂತಹ ಮಾಲುಗಳನ್ನು ವಶದಲ್ಲಿಟ್ಟುಕೊಳ್ಳಲು ಪ್ರಾಧಿಕೃತ ಅಧಿಕಾರಿಗಳಿಂದ ಅನುಮತಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಜಪ್ತು ಪಂಚನಾಮೆ ಎಂಬ ದಾಖಲೆಯನ್ನು ನೋಡಿದ್ದು ಅದರಲ್ಲಿದ್ದ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿಯು ಸ್ವ ಇಚ್ಛಾ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಪ್ರಾಧಿಕೃತ ಅಧಿಕಾರಿಗಳಿಂದ ಅನುಮತಿ ಪಡೆದ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಪಡಿಸಿರುವ ಬೆಲ್ಲದ ಕೊಳೆ ಹಾಗೂ ಕಳ್ಳಬಟ್ಟಿ ಸಾರಾಯಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು–1 ರಿಂದ 3 ಎಂದು ಗುರುತಿಸಲಾಯಿತು. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–7 ರವರಿಗೆ ಹಸ್ತಾಂತರಿಸಿರುತ್ತೇನೆ. ಆರೋಪಿತೆಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಆರೋಪಿ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ತನ್ನ ವಕೀಲರು ಹೇಳಿದ ಮೇರೆಗೆ ಆರೋಪಿಯ ಗುರುತಿಸುವಿಕೆಯನ್ನು ಕೈ ಬಿಡಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರಸ್ತೆ ಗಾವಲು ಮಾಡುತ್ತಿದ್ದ ಬಗ್ಗೆ ನನ್ನ ದೂರಿನಲ್ಲಾಗಲೀ ಅಥವಾ ಪಂಚನಾಮೆಯಲ್ಲಾಗಲೀ ಹೇಳಿರುವುದಿಲ್ಲ. ಆ ದಿನದಂದು ನಾನು ಯಾವ ಯಾವ ಊರುಗಳಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದೆ ಎಂಬುದರ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ಆ ದಿನದಂದು ಕೇವಲ ಈ ಒಂದು ಪ್ರಕರಣ ಮಾತ್ರ ದಾಖಲಿಸಿರುತ್ತೇನೆ. ಜೂನ್ ತಿಂಗಳು ಮಳೆಗಾಲದ ಪ್ರಾರಂಬ ಎಂದರೆ ಸರಿ. ನಾವು ತುಮರಿಕೊಪ್ಪ ಬಸ್ ನಿಲ್ದಾಣದಿಂದ ಸುಮಾರು 10 ಅಡಿ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪಂಚರನ್ನು ಕರೆದುಕೊಂಡು ಬರಲು ನಮ್ಮ ಸಿಬ್ಬಂದಿಯವರನ್ನು ಕಳುಹಿಸಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ವಾಹನದ ಚಾಲಕ ಹಾಗೂ ಎಲ್ಲಪ್ಪ ರೆಡ್ಡಿ ಎಂಬ ರಕ್ಷಕ ಇದ್ದರು. ಆ ದಿನ ವಾಹನದ ಚಾಲಕ ಮಂಜುನಾಥ ಚಿಕ್ಕಣ್ಣ ಎಂಬುವರಾಗಿದ್ದರು. ನಿಪಿ-1 ಕ್ಕೆ ನಾವು ಚಾಲಕನ ಸಹಿ ಪಡೆದುಕೊಂಡಿರುವುದಿಲ್ಲ.

2. ಆ ದಿನದಂದು ನಾವು ತುಮರಿಕೊಪ್ಪದಿಂದ ತಿಳುವಳ್ಳಿ ರಸ್ತೆಯ ಮೂಲಕ ಗುಡ್ಡದಮಲ್ಲಾಪುರದ ಒಳಗಾಯಿಸಿ ಚೊಗಚಿಕೊಪ್ಪ ತಾಂಡಕ್ಕೆ ಹೋಗಿರುತ್ತೇವೆ. ಚೊಗಚಿಕೊಪ್ಪ ತಾಂಡ ಚಿಕ್ಕ ಗ್ರಾಮ ಎಂದರೆ ಸರಿಯಲ್ಲ. ಸದರಿ ತಾಂಡದಲ್ಲಿ ಅಂದಾಜು 70 ಮನೆಗಳು ಇವೆ. ಸದರಿ ತಾಂಡದಲ್ಲಿ 3 ರಸ್ತೆಗಳು ಬರುತ್ತವೆ. ಆ ರೀತಿ ಆ ಊರಿನಲ್ಲಿದ್ದಂತಹ ಮೊದಲ ರಸ್ತೆ ಮೂಲಕ ನಾವು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಆ ದಿನದಂದು ಘಟನಾ ಸ್ಥಳದ ಪೂರ್ವ ದಿಕ್ಕಿಗೆ ನಮ್ಮ ಜೀಪನ್ನು ನಿಲ್ಲಿಸಿದ್ದೆವು. ಆಗ ಅಲ್ಪ ಸ್ವಲ್ಪ ಸಾರ್ವಜನಿಕರು ಓಡಾಡುತ್ತಿದ್ದರು. ಪಂಚನಾಮೆಯಲ್ಲಿ ಘಟನಾ ಸ್ಥಳದ ಚಕ್ಕುಬಂದಿಯನ್ನು ಬರೆದುಕೊಳ್ಳಲು ಸಾರ್ವಜನಿಕರಿಂದ ಹಾಗೂ ಆರೋಪಿಯಿಂದಲೂ ಮಾಹಿತಿಯನ್ನು ಪಡೆದುಕೊಂಡಿರುತ್ತೇವೆ. ಸಾರ್ವಜನಿಕರು ನಿರಾಕರಿಸಿದ ಬಗ್ಗೆ ನಾನು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ.

3. ನ್ಯಾಯಾಲಯದ ಮುಂದೆ ಹಾಜರಪಡಿಸಿರುವಂತಹ ಬಾಟಲುಗಳು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಸಿಕ್ಕಂತಹ ಮಾಲುಗಳಿದ್ದ ಕೊಡಗಳಲ್ಲಿ ಎಷ್ಟು ಎಷ್ಟು ಪ್ರಮಾಣದಲ್ಲಿ ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡೆವು ಎಂಬುದರ ಬಗ್ಗೆ ನಿಖರವಾಗಿ ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರಪಡಿಸಿರುವ ಮುದ್ದೆ ಮಾಲು-1 ರಿಂದ 3 ರ ಬಗ್ಗೆ ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಆರೋಪಿತೆಯ ವಿರುದ್ದ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಂದತೆ ಪಂಚರ ಸಮಕ್ಷವದಲ್ಲಿ ಸಿಕ್ಕಂತಹ ಮಾಲುಗಳಲ್ಲಿ ರಸಾಯನಿಕ ಪರೀಕ್ಷೆಗಾಗಿ ಸ್ವಲ್ಪ ಪ್ರಮಾಣದಲ್ಲಿ ತೆಗೆದುಕೊಂಡಿರುತ್ತೇನೆಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ದಳಕ್ಕು ಹಾಗೂ ಆರೋಪಿತೆಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಜವಾದ ಆರೊಪಿಯನ್ನು ಬಿಟ್ಟು ಮುಗ್ದ ಮಹಿಳೆಯ ಮೇಲೆ ಈ ದೂರನ್ನು ದಾಖಲಿಸಿರುತ್ತೇನೆ

ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಯಾವುದೇ ಇಲ್ಲ ಎಂದು ನನಗೆ ಗೊತ್ತಿದ್ದರೂ ಕೂಡ ಈ ಸುಳು ದೂರನ್ನು ದಾಖಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ನಿಪಿ–1 ನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.